(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಇದು ಬಹಳ important ಆಗಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಸ್ವಾಮಿ, ತಾವು withdraw ಮಾಡುತ್ತೀರಾ ಅಥವಾ ಇಲ್ಲವಾ? ಸುಮ್ಮನೆ ಅವರನ್ನು ಮತ್ತು ಇವರನ್ನು ಕರೆಯುತ್ತೇವೆಂದರೆ ಹೇಗೆ? ಅದರ ಬಗ್ಗೆ ತಾವು ಹೇಳಬೇಕು.

(ಗೊಂದಲ)

ಶ್ರೀ ವಿ.ಸೋಮಣ್ಣ : ಆಯಿತು, ಸಿದ್ದರಾಮಯ್ಯನವರೆ, ನಿಮ್ಮ ಸ್ನೇಹಿತರಾದ ಶ್ರೀ ಮಹಾದೇವಪ್ಪನವರದು ಒಂದು ಅಭಿಪ್ರಾಯ. ಡಾ: ಶರಣ ಪ್ರಕಾಶ್ ಪಾಟೀಲ್‌ರವರದು ಒಂದು ಅಭಿಪ್ರಾಯ. ನಮ್ಮದು ಇಷ್ಟೇ..

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್ : ನೀವು ನಮ್ಮ opinion ಕೇಳುತ್ತೀರಾ? ನಿಮ್ಮ opinion ಹೇಳಿ.

ಡಾ: ಹೆಚ್.ಸಿ.ಮಹಾದೇವಪ್ಪ : It is not in accordance with the provisions of law. That itself is a mistake. ನೀವು ಅಧಿಕಾರಿಗಳನ್ನು appointment ಮಾಡಿದ್ದೀರಿ. ಅವರೆಲ್ಲಾ...

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : Governor has rejected this Bill. ಅದರ ಬಗ್ಗೆ ಮಂತರಿಗಳಿಗೆ ಏನೂ ಗೊತ್ತಿಲ್ಲ.

ಡಾ: ಹೆಚ್.ಸಿ.ಮಹಾದೇವಪ್ಪ : ಸೋಮಣ್ಣನವರು ಹೇಗೆ ಬೇಕೆಂದರೆ ಹಾಗೆ ಮಾತನಾಡಿದರೆ ಹೇಗೆ? ಸಂವಿಧಾನದಲ್ಲಿ ಏನು ತಿದ್ದುಪಡಿ ಆಗಿತ್ತು? ನಾವು ಏನು ಮಾಡಬೇಕು? ನಿಮ್ಮ ಇಷ್ಟ ಬಂದ ಹಾಗೆ ಮಾತನಾಡಿದರೆ ಹೇಗೆ? You have to fuction according to the provision of law. You cannot act according to your whims and fancies.

(ಈ ಹಂತದಲ್ಲಿ ಜೆ.ಡಿ.(ಎಸ್). ಪಕ್ಷದ ಹಲವು ಸದಸ್ಯರು ಸದನದ ಬಾವಿಯಲ್ಲಿ ಮಾನ್ಯ ವಸತಿ ಸಚಿವರ ಸ್ಥಾನದ ಬಳಿ ಬಂದು ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ವಿ.ಸೋಮಣ್ಣ : ಮಾನ್ಯ ಅಧ್ಯಕ್ಷರೇ, ಇವತ್ತು ಆಯ್ಕೆಯಲ್ಲಿರುವ Assistant Commissioner ವರನ್ನು withdraw ಮಾಡುತ್ತೇವೆ. ಎರಡನೆಯದಾಗಿ ಜಾಗೃತ ಸಮಿತಿಯಲ್ಲಿ ಇಂದಿರಾ ಆವಾಸ್‌ಗೆ ಬರುವುದಕ್ಕೆ ಗ್ರಾಮ ಸಭೆಗಳಿಂದಲೇ ಆಯ್ಕೆಯಾಗಬೇಕಾಗುತ್ತದೆ. ಕರ್ನಾಟಕ ಸರ್ಕಾರ ಕೊಟ್ಟಿರುವಂಥ ತೆರಿಗೆ ಹಣ ನಮ್ಮದು ತೆರಿಗೆ ಹಣವೇ, ಹಿಂದೆ ಇದ್ದುದು ತೆರಿಗೆ ಹಣವೇ. ಸಿದ್ದರಾಮಯ್ಯನವರದ್ದಕ್ಕೆ ಮಾತ್ರ ತೆರಿಗೆ ಹಣ, ನಮ್ಮದಕ್ಕೆ ತೆರಿಗೆ ಹಣವಲ್ಲ ಎಂದಲ್ಲ ಎಲ್ಲರದ್ದು ಒಂದೇ ಹಣ.

ಅಧ್ಯಕ್ಷರು : ಪ್ಲೀಸ್. ಅಲ್ಲೆಕೆ ನಿಂತಿದ್ದೀರಿ? ನಿಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ವಿ. ಸೋಮಣ್ಣ : ಆದರೆ ಕರ್ನಾಟಕ ಸರ್ಕಾರ ಬಸವ ವಸತಿ ಯೋಜನೆಯಡಿಯಲ್ಲಿ ಅದನ್ನು ಶಾಸಕರ ಅಧ್ಯಕ್ಷತೆಯಲ್ಲಿ ಮಾಡತಕ್ಕಂಥದ್ದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೆ. ಇದರಲ್ಲಿ ಏನಾದರೂ ಲೋಪಗಳಾದರೆ ಪಾರದರ್ಶಕವಾಗಿ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೇವೆಂದಲ್ಲ, ಶಾಸಕರಾದವರು ಯಾವುದೇ ಕಾರಣಕ್ಕೂ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಈ ಕೆಲಸವನ್ನು ಮಾಡಬೇಕಾಗುತ್ತದೆ. ಇದರಲ್ಲೇನಾದರೂ ತಾವು ಎಚ್ಚರಿಕೆ ತಪ್ಪಿದರೆ ನಿಮ್ಮನ್ನೂ ಕೂಡ ಕಾನೂನಿನಡಿಯಲ್ಲಿ ತರಬೇಕಾಗುತ್ತದೆ.

ಅಧ್ಯಕ್ಷರು : ಈಗ ಹ್ಯಾರಿಸ್ ಪ್ರಶ್ನೆ ಕೇಳಿ.

(ಜೆ.ಡಿ.(ಎಸ್). ಪಕ್ಷದ ಮಾನ್ಯ ಸದಸ್ಯರು ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)

ಬೆಂಗಳೂರು ಮಹಾನಗರ ಪ್ರದೇಶದಲ್ಲಿರುವ ಬಡವರಿಗೆ ವಸತಿ ಯೋಜನೆಗಳ ಸೌಲಭ್ಯ

110 (1128) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರದಲ್ಲಿರುವ ಬಡವರು ಮತ್ತು ವಸತಿ ಹೀನರಿಗೆ ವಸತಿ ಇಲಾಖೆಯವರು ಅನುಷ್ಠಾನಗೊಳಿಸುತ್ತಿರುವ ವಿವಿಧ ವಸತಿ ಯೋಜನೆಗಳ ವಿವರಗಳೇನು?

ಆ) ವಸತಿ ಇಲಾಖೆಯವರು ಕಳೆದ 3 ವರ್ಷಗಳಲ್ಲಿ ಅನುಷ್ಠಾನಗೊಳಿಸಿರುವ ಯೋಜನೆಗಳ ವಿಧಾನ ಸಭಾ ಕ್ಷೇತ್ರವಾರು ಸಂಖ್ಯಾ ವಿವರಗಳೇನು; (ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಸಂಬಂಧಿಸಿದಂತೆ)?